Sri G. B. SHANKARA RAO.—There were about 10 to 12 buildings to be constructed for the Assistant Engineer's Office, residential quarters and Stores. The land was taken possession of from the land owners. Later on when we tried to construct the required buildings, we came to know that it was not sufficient. Lastly, looking to the actual requirements of the land for our purpose, we measured it and it was found to be about 2 acres and 24 guntas.

ಶ್ರೀ ಸಿ. ಆರ್. ರಂಗೇಗೌಡ.—1957ರಲ್ಲೇ ಸರಕಾರಕ್ಕೆ ಈ ಜಾಗ ಬೇಕಾಗಿದೆ ಎಂದು ರೈತರಿಂದ ಪೂರ್ತಿಯಾಗಿ ತೆಗೆದುಕೊಂಡು ಇಲ್ಲಿ ಕ್ವಾರ್ಟರುಗಳನ್ನು ಕಟ್ಟಬೇಕೆಂದು ಪ್ಲಾನು ಮಾಡಿದ್ದರಿಕಾರ್ಡುಗಳನ್ನು ಕಳೆದುಬಿಟ್ಟಿದ್ದಾರೆಂದು ಗೊತ್ತಿದ್ದರೂ ಈಗ ಹೊಸದಾಗಿ ರಿಕಾರ್ಡುಗಳನ್ನು ಮಾಡುತ್ತಿದ್ದಾರೆಂದು ಒಂದು ತರಹದ ಕುಂಟು ನೆಪ ಹೇಳುತ್ತಿರುವುದು ಸರಿಯೇ?

Sri G. B. SHANKARA RAO.—Sir, we are not putting forth any lame excuse. The records were built up as long ago as 1960. The records cou d not be traced because the Magadi Sub-Division which was under the Bangalore Division came over to Ramanagaram Sub-Division after re-organisation. The records were not lost, but they could not be traced easily. We have taken action to see that the records are traced and compensation given as early as possible.

ಶ್ರೀ ಸಿ. ಆರ್. ರಂಗೇಗೌಡ.—1957ನೇ ಇಸವಿಯಿಂದಲೂ ಸರಕಾರ ಜಮೀನು ಸ್ವಾಧೀನ ಮಾಡಿಕೊಂಡಿದ್ದರೂ ಈವರೆಗೂ ಜಮೀನನ್ನು ಪಡೆದಿದ್ದವರಿಗೆ ಸರಕಾರದವರು ಯಾವ ಪ್ರತಿಫಲವನ್ನೂ ಪೂರ್ಣವಾಗಿ ಕೊಟ್ಟಿಲ್ಲ. ಜಮೀನಿಗೆ ಪರಿಹಾರ ಕೊಡುವಾಗ ಅದರ ಜೊತೆಯಲ್ಲಿ ಸುಸ್ತಿ ಬಡ್ಡಿಯನ್ನೂ ಸೇರಿಸಿ ಕೊಡುತ್ತೀರಾ?

Sri G. B. SHANKARA RAO.—The land owners will be given compensation together with interest from the date of taking possession of the land. The allegations made by the members that the land belonging to the owners elsewhere is taken possession of is not a fact.

ಶ್ರೀ ಸಿ. ಆರ್. ರಂಗೇಗೌಡ.—1957ನೇ ಇಸವಿಯಲ್ಲೇ ಜಮೀನು ಸ್ವಾಧೀನಪಡಿಸಿಕೊಂಡಿರುವುದರಿಂದ ಅವರಿಗೆ ಪರಿಹಾರ ಕೊಡುವಾಗ 1957ನೇ ಇಸವಿಯಿಂದಲೂ ಲೆಕ್ಕಾಚಾರ ಮಾಡಿ ಕೊಡುತ್ತಾರೆಯೇ?

Sri G. B. SHANKARA RAO.—Sir, I have made it clear that interest will be calculated from the date of taking possession of the land for our purposes.

Amount allotted to Hassan District under Land Improvement Loan during 1961-62, 1962-63 and 1963-64.

*Q.—127. Sri H. D. DEVE GOWDA (Holenarasipur).—

Will the Government be pleased to state :—

(*a*) the amount allotted to Hassan District under Land Improvement Loan head during the years 1961-62, 1962-63 and 1963-64.

(*b*) the basis on which the Deputy Commissioner has allotted loan amounts to different Sub-Divisions and Taluks ;

(*c*) whether such loans have been utilised for the purposes for which they were sanctioned ?

A.—Sri M. V. KRISHNAPPA (Minister for Revenue).—

(*a*)	1961-62	1962-63	1963-64
	Rs.	Rs.	Rs.
	50,000	90,000	1,33,000

(*b*) On the basis of the demand from the several units and the allotment sanctioned to the District.

(*c*) Yes.

ಶ್ರೀ ಎಚ್. ಡಿ. ದೇವೇಗೌಡ.—(ಬ)ಗೆ ಉತ್ತರವಾಗಿ "ಒದಗಿಸಿರುವ ಮೊಬಲಗಿನ ಆಧಾರದ ಮೇಲೆ ಹಂಚುವಾಗುತ್ತದೆ" ಎಂದು ಹೇಳಿದ್ದೀರಿ. ಯಾವ ಆಧಾರದ ಮೇಲೆ ಹಂಚುತ್ತೀರಿ?

ಶ್ರೀ ಎಂ. ವಿ. ಕೃಷ್ಣಪ್ಪ.—ಜಿಲ್ಲಾಧಿಕಾರಿಗಳು ಇಂತಿಂತಹ ನಿಯಮಗಳನ್ವಯ ನಿರಿಸಿ ಹಂಚಿ ಕೊಡಬೇಕೆಂದಿದೆ. ಅದರ ಪ್ರಕಾರ ಅವರು ಕೊಡುತ್ತಾರೆ. ಸಾಮಾನ್ಯವಾಗಿ ಭೂಮಿಯ ಬೆಲೆ ಗಳ ಆಧಾರದ ಮೇಲೆ ಕೊಡುತ್ತಾರೆ.

ಶ್ರೀ ಎಚ್. ಡಿ. ದೇವೇಗೌಡ.—ಜಿಲ್ಲಾಧಿಕಾರಿಗಳು ಇದನ್ನು ಹಂಚುವ ಅಧಿಕಾರ ಎಂದರೆ ಡಿಸ್ಕ್ರಿಷನ್ ಪವರ್ ತಮಗೆ ಇದೆ ಎಂದು ಯಾವ ಅರ್ಜಿಗಳು ಬಂದರೂ ಸರಿಯಾಗಿ ಗಮನಕ್ಕೆ ತೆಗೆದು ಕೊಳ್ಳದೆ ಈ ಸಾಲಗಳನ್ನು ಕೊಡವೇ ಇರುವುದು ನ್ಯಾಯವಾದ ಗಮನಕ್ಕೆ ಬಂದಿದೆಯೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಸದಸ್ಯರು ಹೇಳಿದಂತೆ ಜಿಲ್ಲಾಧಿಕಾರಿಗಳು ಹಾಗೆ ಹಂಚು ವುದಕ್ಕಾಗುವುದಿಲ್ಲ. ಹಣ ಎಷ್ಟು ಒದಗಿಸಲಾಗಿರುತ್ತದೋ ಅದನ್ನು ನೋಡಿಕೊಂಡು ಹಂಚಬೇಕಾ ಗುತ್ತದೆ. ಅದಕ್ಕೆ ಸರಿಯಾದ ಆಧಾರ ಇದೆಯೇ ಇಲ್ಲವೇ ಎನ್ನುವುದನ್ನು ನೋಡಿಕೊಂಡು ಕೊಡು ತ್ತಾರೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮಂತ್ರಿಗಳು ಹೇಳಿದ ಹಾಗೆ ಎಷ್ಟು ಜಿಲ್ಲಾಧಿಕಾರಿ ಗಳು ಉದಾರವಾಗಿ ಹಣವನ್ನು ಹಂಚಿದ್ದಾರೆ? ಪ್ರಯಾರಿಟಿಯ ಮೇಲೆ ಬಂದ ಅರ್ಜಿಗಳಿಗೆ ಮೊದಲು ಸಹಾಯವನ್ನು ಮಂಜೂರು ಮಾಡಿದ್ದಾರೆಯೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಬಹಳ ಕಡಿಮೆ ಹಣ ಇರುತ್ತದೆ. ಆದರೆ ಅರ್ಜಿಗಳು ಬಹಳವಾಗಿ ಬಂದಿರುತ್ತವೆ. ಆಗ ಡೆಪ್ಯೂಟಿ ಕಮಿಷನ್ನಿನವರು ತಮ್ಮ ಡಿಸ್ಕ್ರಿಷನರಿ ಪವರನ್ನು ಚರಾಯಿಸಿ ಇಂತಹ ವರಿಗೆ ಸಾಲ ಕೊಟ್ಟರೆ ವಾಪಸ್ಸು ಬರುತ್ತದೆ, ಇಂತಹವರು ಇದಕ್ಕೆ ಅರ್ಹರಾಗಿರುತ್ತಾರೆಯೇ ಎನ್ನುವುದನ್ನೆಲ್ಲಾ ನೋಡಿಕೊಂಡು ಹಂಚಬೇಕಾಗಿ ಬರುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಸರ್ಕಾರದವರು ಜಿಲ್ಲೆಗಿಷ್ಟು ಹಣ ಎಂದು ಕೊಟ್ಟಿರುವಾಗ ನಮ್ಮ ಜಿಲ್ಲೆಯಲ್ಲಿ ಸುಮಾರು ಒಂದು ಒಂದೂವರೆ ಲಕ್ಷ ರೂಪಾಯಿಗೆ ಸಾಲದ ಅರ್ಜಿಗಳಿದ್ದಾಗ್ಯೂ ಅವುಗಳನ್ನು ಮೂರೆಗೊತ್ತಿ ಕೇವಲ ಒಬ್ಬ ವ್ಯಕ್ತಿಗೋಸ್ಕರ 20 ಸಾವಿರ ರೂಪಾಯಿಗಳನ್ನು ರಿಜ್ಞರ್ವ್ ಮಾಡಿ 6 ತಿಂಗಳ ಗಟ್ಟಲೆ ಹಣವನ್ನಿಡತಕ್ಕ ಅಗತ್ಯವೇನಿತ್ತು?

ಶ್ರೀ ಎಂ. ವಿ. ಕೃಷ್ಣಪ್ಪ.—ಜಿಲ್ಲಾಧಿಕಾರಿಗಳೇನಿದ್ದರೂ ಶಿಫಾರ್ಸ್ ಮಾಡುತ್ತಾರೆ. ಅವರು ಯಾರಿಗೂ ಹಣವನ್ನು ಕೊಡುವುದಿಲ್ಲ. ಇತ್ತೀಚೆಗೆ ಈ ಲ್ಯಾಂಡ್ ಇಂಪ್ರೂವ್‌ಮೆಂಟ್ ಸಾಲವನ್ನು ಹೆಚ್ಚಿಗೆ ಕೊಡುತ್ತಲೇ ಇಲ್ಲ. ಈಗ ಸೊಸೈಟಿಗಳಲ್ಲಿ ಷಾರ್ಟ್‌ಟರ್ಮ್, ಮಾಡಿಯಂ, ಮತ್ತು ಲಾಂಗ್ ಟರ್ಮ್ ಸಾಲಗಳನ್ನು ಕೊಡುವುದಕ್ಕೆ ಪ್ರಾರಂಭವಾದ ಮೇಲೆ ಈ ಸಾಲವನ್ನು ಕಡಮೆ ಮಾಡಲಾ ಗಿದೆ. ಅನಿವಾರ್ಯ ಸಂದರ್ಭದಲ್ಲಿ ಮಾತ್ರ ರೆವಿನ್ಯೂ ಇಲಾಖೆಯವರು ಈ ಲ್ಯಾಂಡ್ ಇಂಪ್ರೂವ್ ಮೆಂಟ್ ಸಾಲವನ್ನು ಕೊಡುತ್ತಾರೆ. ಈ ಬಾಬಿಗೆ ಇಡೀ ಜಿಲ್ಲೆಗೆಲ್ಲಾ ಇರತಕ್ಕ ಹಣ 15–20 ಸಾವಿರ.

ಶ್ರೀ ಎಚ್.ಆರ್. ಕೇಶವಮೂರ್ತಿ.—ಸಂಸ್ಥಾನಾ ಮಳೆ ಈ ಸಾಲಕ್ಕಾಗಿ ಕೇವಲ 500-1,000 ಸಾವಿರ ರೂಪಾಯಿಗಳ ಸಾಲಕ್ಕೆ ಸಹಸ್ರಾರು ಅರ್ಜಿಗಳಿರುವಾಗ ಅವುಗಳನ್ನು ಮೂಲೆಗಿಟ್ಟು ಕೇವಲ ತಮಗೆ ಬೇಕಾದವರಿಗೆ 2–3 ಸಾವಿರ ರೂಪಾಯಿಗಳನ್ನು ಕೊಡತಕ್ಕದ್ದು ತಪ್ಪಲ್ಲವೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಜಿಲ್ಲಾಧಿಕಾರಿಗಳೆಲ್ಲಾ ಈ ದಿವಸ ಈ ಬಾಬಿನಲ್ಲಿ ಸಾಲ ಕೊಟ್ಟಿದ್ದರೆ 5-6 ಜನರಿಗೆ ಜನರಿಗೆ ಕೊಟ್ಟಿರಬಹುದು. ಅಮಲ್ದಾರರಾದರೆ ತಲಾ 500, 400, 300 ಹೀಗೆ ನೂರಾರು ಜನಗಳಿಗೆ ಸಾಲ ಕೊಟ್ಟಿದ್ದಾರೆ. ಜಿಲ್ಲಾಧಿಕಾರಿಗಳಾದರೂ ತೀರಾ ಅನಿವಾರ್ಯ ಸಂದರ್ಭದಲ್ಲಿ ಕೊಟ್ಟಿರಬಹುದು. ಇವರೇನಿದ್ದರೂ ಶಿಫಾರಸ್ಸು ಮಾಡುತ್ತಾರೆ ವಿನಾ ಸಾಲವನ್ನು ಅವರೇ ನೇರವಾಗಿ ಕೊಡುವುದಿಲ್ಲ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಈ ಮೊಬಲಗನ್ನು ಸಬ್ ಡಿವಿಜನ್‌ಗಳಿಗೆ ಕೊಡದೆ ಕೇವಲ ತಾಲ್ಲೂಕುಗಳಿಗೆ ಹಂಚಲು ಕಾರಣವೇನು?

ಶ್ರೀ ಎಂ. ವಿ. ಕೃಷ್ಣಪ್ಪ.—ಸಬ್‌ಡಿವಿಜನ್‌ಗಳಿಗೆ ಕೊಟ್ಟರೂ ಅವರು ಮತ್ತೆ ತಾಲ್ಲೂಕುಗಳಿಗೇ ಹಂಚುತ್ತಾರೆ. ಇದರಲ್ಲಿ ತಪ್ಪೇನೂ ಇಲ್ಲವಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಅಮರ್ಕಾರರು, ಸಬ್‌ಡಿವಿಜನ್ ಆಫೀಸರು ಮತ್ತು ಜಿಲ್ಲಾಧಿಕಾರಿಗಳು ಇವರು ಒಬ್ಬೊಬ್ಬರೂ ಹಂಚಿರತಕ್ಕ ಹಣವೆಷ್ಟು ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದನ್ನು ಉತ್ತರದಲ್ಲೇ ಹೇಳಿದೆ. ಇನ್ನು ಜಿಲ್ಲಾಧಿಕಾರಿಗಳು ಪಾರ್ಟಿಗಳ ಧಡೂತಿಯನ್ನು ನಿರ್ಧರಿಸಿ ಸಾಲ ಮಂಜೂರು ಮಾಡುತ್ತಾರೆ. 1961-62 ರಲ್ಲಿ ಜಿಲ್ಲಾಧಿಕಾರಿಗಳು 3 ಸಾವಿರ ರೂಪಾಯಿಗಳನ್ನೂ, ಅಮರ್ಕಾರರು 80,000 ರೂಪಾಯಿಗಳನ್ನು 1962-63ರಲ್ಲಿ ಜಿಲ್ಲಾಧಿಕಾರಿಗಳು : 5,000 ರೂಪಾಯಿಗಳನ್ನೂ, ಅಮರ್ಕಾರರು 64,000 ರೂಪಾಯಿಗಳನ್ನೂ ಮತ್ತು 1963-64ರಲ್ಲಿ ಜಿಲ್ಲಾಧಿಕಾರಿಗಳು : 54,000 ರೂಪಾಯಿಗಳನ್ನೂ ಅಮರ್ಕಾರರು 40,000 ರೂಪಾಯಿಗಳನ್ನೂ ಮತ್ತು ಸಬ್‌ಡಿವಿಜನ್ ಅವರು 14,500 ರೂಪಾಯಿಗಳನ್ನೂ ಕೊಟ್ಟಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ಇಲ್ಲಿ ಕೊಟ್ಟಿರತಕ್ಕ ಉತ್ತರ ತಪ್ಪಾಗಿದ್ದರೆ ಈ ತಪ್ಪು ಉತ್ತರಗಳನ್ನು ಒದಗಿಸಿರತಕ್ಕ ಅಧಿಕಾರಿಗಳ ಮೇಲೆ ಏನು ಕ್ರಮವನ್ನು ಕೈಗೊಳ್ಳುತ್ತೀರಿ ?

ಅಧ್ಯಕ್ಷರು.—ಅದು ಊಹಾಪೋಹದ ಪ್ರಶ್ನೆ.

ಶ್ರೀ ಎಸ್. ಶಿವಪ್ಪ.—1963-64 ರಲ್ಲಿ ಡಿ. ಸಿ. ಅವರು ನೇರವಾಗಿ ಹಂಚಿರತಕ್ಕ 54,000 ರೂಪಾಯಿಗಳಲ್ಲಿ ಯಾರು ಯಾರಿಗೆ ಎಷ್ಟೆಷ್ಟು ಹಂಚಿದ್ದಾರೆಂಬುದನ್ನು ತಿಳಿಸುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ನಧ್ಯಕ್ಕೆ ನನ್ನಲ್ಲಿ ಆ ವಿವರಗಳಿಲ್ಲ. ಡಿ. ಸಿ. ಕೊಟ್ಟಿಲ್ಲ ಅವರು ಸರ್ಕಾರಕ್ಕೆ ಅಷ್ಟನ್ನು ಶಿಫಾರಸು ಮಾಡಿದ್ದಾರೆ ಅಷ್ಟೆ.

ಶ್ರೀ ಜಿ. ರಾಮೇಗೌಡ.—ಹಾಸನ ಜಿಲ್ಲೆಯಲ್ಲಿ ಯಾವ ಅಭಿವೃದ್ಧಿಕಾರ್ಯಗಳಿಗಾಗಿ ಇಷ್ಟು ಹಣವನ್ನು ಕೊಡರಾಗಿದೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಲ್ಯಾಂಡ್ ಇಂಪ್ರೂವ್‌ಮೆಂಟಿನ ಬಗ್ಗೆ.

ಶ್ರೀ ಎ. ಕೃಷ್ಣಶೆಟ್ಟಿ.—ಸಾಲ ಕೊಡತಕ್ಕ ವಿಚಾರದಲ್ಲೂ ರಾಜಕೀಯ ಇದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ರಾಜ್ಯದಲ್ಲಿ ಒಂದಲ್ಲಾ ಒಂದು ಪಾರ್ಟಿಯಲ್ಲಿರತಕ್ಕ ಜನರು ಸಾಲಕ್ಕೆ ಬರುತ್ತಾರೆ. ಅದರಿಂದ ಅದರಲ್ಲೂ ರಾಜಕೀಯವಿದೆ ಎಂದು ಹೇಳಿದರೆ ತಪ್ಪೇನಿದೆ ?

Sri GANJI VEERAPPA.—Is there any maximum limit of loan that can be given under the Land Improvement Loan ?

ಶ್ರೀ ಎಂ. ವಿ. ಕೃಷ್ಣಪ್ಪ.—ಡಿ. ಸಿ. ಯವರು 5 ಸಾವಿರದವರೆಗೆ ಕೊಡಬಹುದೆಂದು ಲಿಮಿಟ್ಟಿದೆ. ಆದರೆ ಚಿತ್ರದುರ್ಗ ಜಿಲ್ಲೆಯಲ್ಲಿ ಮಾತ್ರ ಎರ್ಲೋ ಒಂದೆರಡು ನಂದರ್ಭಗಳಲ್ಲಿ 12-15 ಸಾವಿರ ಕೊಟ್ಟಿರತಕ್ಕ ನಿದರ್ಶನಗಳು ನನಗೆ ಜ್ಞಾಪಕದಲ್ಲಿದೆ. ಆದರೆ ಈಗ ಈ ಸಾಲವನ್ನೇ ಕೊಡುತ್ತಿಲ್ಲ.

ಶ್ರೀ ಎಸ್. ಶಿವಪ್ಪ.—ಬಡವರ ಅರ್ಜಿಗಳನ್ನು ಬದಿಗೊತ್ತಿ ಬೇರೆಯವರಿಗೆ ಸಾಲ ಕೊಡಲು ಈ ಸಾಲವೇನು ರಾಜಿಕೀಯ ನಂತ್ರಸ್ತರ ಸಾಲವೋ ?

Sri M. V. KRISHNAPPA.—No. If that man who receives a loan belongs to the Congress Party, he has every right to get that loan even as a citizen of the State-not necessarily as a member of the Congress Party.

ಶ್ರೀ ಜಿ. ರಾಮೇಗೌಡ.—ನಹಕಾರಿ ಇಲಾಖೆಗಳಲ್ಲಿ ಸಾಲಕ್ಕೆ ಒಂದು ಮಿತಿಯನ್ನು ಹಾಕಿರುವಂತೆ ಇದಕ್ಕೂ ಒಂದು ಮಿತಿಯನ್ನು ಹಾಕುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—5 ಸಾವಿರದ ತನಕ ಡಿ. ಸಿ. ಕೊಡಬಹುದು. ಅದಕ್ಕೆ ಮೇಲ್ಪಟ್ಟು ದ್ದೆಲ್ಲಾ ಸರ್ಕಾರಕ್ಕೆ ಬರಬೇಕು.

ಶ್ರೀ ಎಚ್. ಆರ್. ಕೇಶವಮೂರ್ತಿ.—ಹಾಸನ ಜಿಲ್ಲೆಯಲ್ಲಿ ಸಾಲ ಮಂಜೂರು ಮಾಡತಕ್ಕ ಅಧಿಕಾರಿಗಳು ಸಾವಿರಾರು ಅರ್ಜಿದಾರರ ಅರ್ಜಿಗಳಿದ್ದಾಗ್ಗೂ ಅವುಗಳನ್ನು ತಿರಸ್ಕರಿಸಿ 54,000 ರೂಪಾಯಿಗಳ ಸಾಲವನ್ನೆಲ್ಲಾ ಕೇವಲ ತಮ್ಮ ನಂಬಂಧಿಗಳಿಗೇ ಕೊಟ್ಟಿರತಕ್ಕ ವಿಚಾರ ನರಕಾರಕ್ಕೆ ಗೊತ್ತಿದೆಯೇ ? ಇದನ್ನು ವಿಚಾರ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅವರು ಅಷ್ಟು ಹಣವನ್ನೂ ಕೊಟ್ಟಿಲ್ಲ. ಆ ವಿಚಾರ ನಮ್ಮ ಗಮನಕ್ಕೂ ಬಂದಿಲ್ಲ.